## ಗಾರ್ಮೆಂಟ್ಸ್ ಮಹಿಳೆಯರ ಬದುಕಿನ ಮಾನವ ಹಕ್ಕನ್ನು ಬೆಂಬಲಿಸೋಣ. . . . ಬನ್ನಿ

ಗ್ಯಾಪ್, ನೈಕಿ, ವಾಲ್ಮಾರ್ಟ್, ಲೀ, ಲೀವೈಸ್, ರ್‍ಯಾಂಗ್ಲರ್, ಪೀಟರ್ ಇಂಗ್ಲಂಡ್, ......... ಅತ್ಯಾಧುನಿಕ ಹಾಗೂ ಅತ್ಯಂತ ಶೋಕಿಯ ಸಿದ್ಧ ಉಡುಪುಗಳ ಮೇಲೆ ಅಂಟಿಸಲಾದ ಜಗದ್ವಿಖ್ಯಾತ ಬ್ರಾಂಡುಗಳ ಹೆಸರುಗಳಿವು. ಬ್ರಾಂಡಿನ ಹೆಸರು ನೀಡುವುದಕ್ಕಷ್ಟೇ ಆ ಕಂಪನಿಗಳು ಕೋಟ್ಯಂತರ ಡಾಲರುಗಳನ್ನು ಬಾಚಿಕೊಳ್ಳುತ್ತವೆ. ಕಾರಣ, ಈ ಬ್ರಾಂಡಿನ ಹೆಸರಿರುವ ಸಿದ್ಧ ಉಡುಪುಗಳು ಯಾವೂ ಕನಿಷ್ಠ ಸಾವಿರದೈನೂರಕ್ಕಿಂತ ಕಡಿಮೆಯಿಲ್ಲ. ಈ ಬ್ರಾಂಡಿನ ಹೆಸರಿನ ಉಡುಪು ತೊಡುವುದು ಶೋಕಿಯ ಸಂಕೇತವಷ್ಟೇ ಅಲ್ಲ, ಪ್ರತಿಷ್ಠೆಯ ಸಂಕೇತವೂ ಆಗಿದೆ. ಹಾಗಾಗಿ ಹೆಸರಿನ ಕಿಮ್ಮತ್ತಿಗೆ ಜನ ದುಡ್ಡು ತೆರುತ್ತಾರೆ. ಈ ಖ್ಯಾತಿಯ ಮೂಲವನ್ನು ಅರಸಿ ಹೊರಟರೆ ನಿಮಗೆ ಎದುರಾಗುವುದು ಬಡ ಮಹಿಳೆಯರ ಬವಣೆಯ ಬದುಕಿನ ಬಾಗಿಲುಗಳು.

ಅಮೆರಿಕಾ, ಯುರೋಪ್, ಆಸ್ಟ್ರೇಲಿಯಾ, ಜಪಾನ್ – ಹೀಗೇ ಜಗತ್ತಿನಾದ್ಯಂತ ಮಾರಾಟವಾಗುವ ಸಿದ್ಧ ಉಡುಪುಗಳನ್ನು ಸಿದ್ಧ ಪಡಿಸುವವರು ಬೆಂಗಳೂರಿನ ಕಿಂಚೇನ ಹಳ್ಳಿ, ಗಂಗೊಂಡನ ಹಳ್ಳಿ, ಆವಲಹಳ್ಳಿ, ನಾಯಂಡ ಹಳ್ಳೀ, ಅರ್ಚಕರ ಹಳ್ಳೀ, ಬನ್ನಿಕುಪ್ಪೆ, ಬ್ಯಾಟರಾಯನಪುರಗಳಲ್ಲಿ ವಾಸವಾಗಿರುವ, ರತ್ನಮ್ಮ, ಮದೀನಾ, ನೇತ್ರ, ಸೌಮ್ಯ, ಮಲ್ಲಿಕಾ, ಅನಿತಾ, ಸುಂದರಮ್ಮ, ವೀಣಾ, ಶೋಭಾಳಂತಹ ಮಹಿಳೆಯರು. ಬೆಂಗಳೂರಿನ ಈ ಮಹಿಳೆಯರು ದುಡಿಯುವುದು ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್, ಪಾಂಟೆರೆಯಾನ್ ಫ್ಯಾಷನ್ಸ್ ಲಿ., ಟೆಕ್ಸ್‌ಪೋರ್ಟ್ಸ್ ಗ್ರೂಪ್‌ಆಫ್ ಕಂಪನೀಸ್, ಶಾಹಿ ಎಕ್ಸ್‌ಪೋರ್ಟ್ಸ್‌ನಂತಹ ದೊಡ್ಡ ದೊಡ್ಡ ಕಂಪನಿಗಳ ಹಲವಾರು ಘಟಕಗಳಲ್ಲಿ ದುಡಿಯುತ್ತಾರೆ.

ಯಂತ್ರದೊಂದಿಗೆ ಯಂತ್ರದಂತೆಯೇ ದಿನವೊಂದಕ್ಕೆ 8–10 ಗಂಟೆಗಳ ಕಾಲ ಬಟ್ಟೆ ಹೊಲೆದರೆ ಸಿಗುವುದು ತಿಂಗಳಿಗೆ 2 ಪ್ಯಾಂಟಿನ ಬೆಲೆಯಷ್ಟು! ವಿವಿಧ ಅಳತೆಗೆ ತಕ್ಕಂತೆ ಕರಾರುವಾಕ್ಕಾಗಿ ಕತ್ತರಿಸಿ, ಜೋಡಿಸಿ, ಹೊಲೆಯುವವರು ಬಡ ಮಹಿಳೆಯರು. ನಮ್ಮ ಮಣ್ಣಿನಲ್ಲಿ ಬೆಳೆದ ಹತ್ತಿಯಿಂದ ನೂಲು ತೆಗೆದು ಬಟ್ಟೆ ಮಾಡಿ ಬಣ್ಣ ಹಾಕಿ ಪ್ರಿಂಟ್ ಮಾಡಿ ಕತ್ತರಿಸಿ ಹೊಲೆದು ಐರನ್ ಮಾಡಿ ಬೆಲೆ ಪಟ್ಟಿ ಅಂಟಿಸಿ, ಪ್ಯಾಕ್ ಮಾಡಿ ರಫ್ತಾಗಲು ಸಿದ್ಧ ಪಡಿಸುವವರು ಈ ನೆಲದ ದುಡಿಮೆಗಾರರು. ಬಳಸಲಾಗುವುದು ಈ ನಾಡಿನ ನೆಲ, ಜಲ, ವಿದ್ಯುತ್, ಸಾರಿಗೆ ಇತ್ಯಾದಿಯನ್ನು.

ಸಿದ್ಧ ಉಡುಪಿನಿಂದ ನಮ್ಮ ದೇಶಕ್ಕೆ ಸಿಗುವ ವಿದೇಶೀ ವಿನಿಮಯ 1 ಲಕ್ಷ ಕೋಟಿಗೂ ಅಧಿಕ. ಬೆಂಗಳೂರು ನಗರವೊಂದರಿಂದಲೇ ದೊರಕುವ ವಿದೇಶೀ ವಿನಿಮಯ ಹದಿನೈದು ಸಾವಿರ ಕೋಟಿಗಿಂತಲೂ ಅಧಿಕ. ಸಿದ್ಧ ಉಡುಪು ಉದ್ದಿಮೆಯ ಒಟ್ಟು ವಹಿವಾಟಿನಲ್ಲಿ ಶೇ 25 ರಷ್ಟು ಸ್ಥಳೀಯ ಕಂಪನಿಗಳಿಗೆ ದೊರೆತರೆ ಉಳಿದ ಶೇ 75 ರಷ್ಟು ಸಲ್ಲುವುದು ಅಂತಾರಾಷ್ಟ್ರೀಯ ಬ್ರಾಂಡ್‌ಗಳಿಗೆ. ಕಾರ್ಮಿಕರಿಗೆ ತಿಂಗಳಿಗೆ ಸಿಗುವ ವೇತನ ಮಾತ್ರ, 4500 ರಿಂದ 5000. ಸಿಗುವ ಬೋನಸ್ ಎಂದರೆ ಬೈಗುಳ, ಕಿರುಕುಳ, ಅಮಾನವೀಯ ಕೆಲಸದ ವಾತಾವರಣ.

ದೇಶದ ಅತಿ ದೊಡ್ಡ ಸಿದ್ಧ ಉಡುಪು ಉತ್ಪಾದನಾ ಘಟಕಗಳಿರುವ ನಗರಗಳಲ್ಲಿ ಬೆಂಗಳೂರೂ ಒಂದಾಗಿದೆ.. ಅಲ್ಲದೆ ಗುಣಮಟ್ಟಕ್ಕೆ ಬಂದರೆ ದೇಶದಲ್ಲೇ ಮೊದಲನೇ ಸ್ಥಾನ ಹೊಂದಿದೆ. ಇಲ್ಲಿ ಸಿದ್ಧವಾಗುವ ಉಡುಪುಗಳು, ಜಗತ್ತಿನಾದ್ಯಂತ ಇರುವ ಪ್ರಸಿದ್ಧ ಮಾರುಕಟ್ಟೆಗಳಿಗೆ ಮಾರಾಟವಾಗುತ್ತವೆ. ಕೆಲವು ಬೃಹತ್ ಕಂಪನಿಗಳು ವರ್ಷಕ್ಕೆ 100 ರಿಂದ 1000 ಕೋಟಿಗೂ ಹೆಚ್ಚು ವಹಿವಾಟು ನಡೆಸುತ್ತಿದ್ದು, 10 ರಿಂದ 30 ಸಾವಿರಕ್ಕೂ ಮೀರಿ ಕಾರ್ಮಿಕರಿಗೆ ಕೆಲಸ ನೀಡುತ್ತಿವೆ. ಉದ್ಯಮಕ್ಕೆ ಬರುತ್ತಿರುವ ಲಾಭಾಂಶವು ಎಲ್ಲ ರೀತಿಯಿಂದಲೂ ಗಣನೀಯವಾಗಿ ಹೆಚ್ಚಾಗುತ್ತಿದೆ.

ಈ ಉದ್ಯಮವು ಇಂದು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ, ಮೈಸೂರು, ತುಮಕೂರು ಬಳ್ಳಾರಿ ಜಿಲ್ಲೆಗಳಲ್ಲಿ ಅತಿ ಹೆಚ್ಚು ಜನರಿಗೆ ಉದ್ಯೋಗ ಒದಗಿಸಿದೆ.

ಬೆಂಗಳೂರಿನಲ್ಲಿ ಸುಮಾರು 920 ಕಾರ್ಖಾನೆಗಳಿದ್ದು, ಸರ್ಕಾರೀ ದಾಖಲೆಯ ಪ್ರಕಾರ ಸುಮಾರು 3.55 ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ವಾಸ್ತವದಲ್ಲಿ ಈ ಕಾರ್ಮಿಕರ ಸಂಖ್ಯೆ ಸುಮಾರು 5 ಲಕ್ಷಕ್ಕೂ ಹೆಚ್ಚು. ಈ ಉದ್ಯಮದಲ್ಲಿ ದುಡಿಯುತ್ತಿರುವವರು ಹೆಚ್ಚಿನವರು ಮಹಿಳೆಯರಾಗಿದ್ದು, ಉದ್ಯೋಗಕ್ಕಾಗಿ ಗ್ರಾಮೀಣ ಪ್ರದೇಶದಿಂದ ವಲಸೆ ಬಂದವರಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ದಲಿತರು ಹಾಗೂ ಅಲ್ಪಸಂಖ್ಯಾತರು. ಈ ಮಹಿಳೆಯರಲ್ಲಿ, ಬಹುಪಾಲು ಮಂದಿ, ಏಕಾಂಗಿಯಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತಿದ್ದು, ತಮ್ಮ

Scanned with OKEN Scanner

ಮೇಲೆ ಅವಲಂಬಿತರಾದ ಇತರ ಕುಟುಂಬ ಸದಸ್ಯರನ್ನು ನೋಡಿಕೊಳ್ಳುತ್ತಿದ್ದಾರೆ. ಈ ಕಾರ್ಮಿಕರೆಲ್ಲರಿಗೂ ಸರ್ಕಾರದಿಂದ ನಿಗದಿಯಾದ ಕನಿಷ್ಠವೇತನ ಮಾತ್ರ ದೊರೆಯುತ್ತಿದ್ದು, ಎಷ್ಟೋ ಕಾರ್ಖಾನೆಗಳು ಅದಕ್ಕಿಂತ ಕಡಿಮೆ ವೇತನವನ್ನು ನೀಡುತ್ತಿವೆ. ಜೊತೆಗೆ ಯಾವುದೇ ಹೆಚ್ಚುವರಿ ಭತ್ಯೆ ನೀಡದೆ 8 ಗಂಟೆಗಳಿಗಿಂತ ಹೆಚ್ಚಾಗಿ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿವೆ.

***ಕನಿಷ್ಠವೇತನದ ಪರಿಷ್ಕರಣೆ***

ಉದ್ಯಮಕ್ಕೆ ಇಂದು ರೂ.157.00 ಕನಿಷ್ಠವೇತನ ನಿಗದಿಯಾಗಿದ್ದು, ಕೆಲವು ಕಾರ್ಖಾನೆಗಳಲ್ಲಿ ಅದಕ್ಕಿಂತ ಕಡಿಮೆ ವೇತನ ನೀಡಲಾಗುತ್ತಿದೆ. ಕನಿಷ್ಠವೇತನ ಕಾಯಿದೆಯ ಪ್ರಕಾರ ಗಾರ್ಮೆಂಟ್ಸ್ ಉದ್ಯಮಕ್ಕೆ ಪ್ರತಿ 3 ರಿಂದ 5 ವರ್ಷದೊಳಗೆ ಪರಿಷ್ಕರಣೆಯಾಗಬೇಕು. 2001 ರ ನಂತರ 2009 ರಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೆ ಕನಿಷ್ಠವೇತನ ಪರಿಷ್ಕರಣೆಯಾಯಿತು. 2012ರ ಮಾರ್ಚ್‌ಗೆ 3 ವರ್ಷಗಳ ಅವಧಿ ಮುಗಿದಿರುವುದರಿಂದ, ಸರ್ಕಾರ ಮತ್ತೊಮ್ಮೆ ಕನಿಷ್ಠವೇತನವನ್ನು ಪರಿಷ್ಕರಣೆ ತಕ್ಷಣವೇ ಮಾಡಬೇಕು. ಹಾಗೂ ಕಾರ್ಮಿಕರು ಗೌರವಯುತವಾಗಿ ಬದುಕುವಷ್ಟು ವೇತನವನ್ನು ನಿಗದಿಪಡಿಸಬೇಕು.

***ಶೋಷಣೆ ರಹಿತ ಕೆಲಸದ ವಾತಾವರಣ***

ಮಹಿಳೆಯರು ಕೆಲಸದ ಸ್ಥಳದಲ್ಲಿ ದಿನನಿತ್ಯ ಹಲವಾರು ರೀತಿಯಲ್ಲಿ ತಮ್ಮ ಮೇಲಾಧಿಕಾರಿಗಳಿಂದ ಶೋಷಣೆಗೊಳಗಾಗುತ್ತಿದ್ದಾರೆ. 8 ಗಂಟೆಯಲ್ಲಿ ಸಾಧ್ಯವಾಗದಷ್ಟು ಪ್ರೊಡಕ್ಷನ್ ನಿಗದಿ ಮಾಡುವುದು, ಕಾನೂನು ಬದ್ಧ ರಜೆಯ ನಿರಾಕರಣೆ, ನಾಯಿ, ಕತ್ತೆ ಗೂಬೆ ಎಂದು ಕಾರ್ಮಿಕರನ್ನು ಹೀಯಾಳಿಸುವುದು, ಮುಖದ ಮೇಲೆ ಬಟ್ಟೆ ಎಸೆಯುವುದು, ಕೆಲಸ ಕೊಡದೆ ಎಲ್ಲರ ಮುಂದೆ ನಿಲ್ಲಿಸಿ ಅವಮಾನಿಸುವುದು, ರಜೆ ಹಾಕಿ ಬಂದ ಕಾರ್ಮಿಕರನ್ನು ಒಳಗೆ ಬಿಡದೆ, ಕಾರ್ಖಾನೆಯ ಗೇಟ್ ಮುಂದೆ ಗಂಟೆಗಟ್ಟಲೇ ಕಾಯಿಸುವುದು, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ನೀಡುವುದು, ಹೀಗೇ ಹಲವಾರು ರೀತಿಯಲ್ಲಿ ಮಹಿಳಾ ಕಾರ್ಮಿಕರು ತೊಂದರೆಗೊಳಗಾಗುತ್ತಿದ್ದಾರೆ.

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಾಗುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಸುಪ್ರೀಂ ಕೋರ್ಟ್ ಗೈಡ್ ಲೈನ್ ಪ್ರಕಾರ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ವಿರೋಧೀ ಸಮಿತಿಗಳನ್ನು ರಚಿಸಿ ಅವು ಪರಿಣಾಮಕಾರಿಯಾಗಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳಬೇಕೆಂದು ನಾವು ಆಗ್ರಹಿಸುತ್ತೇವೆ.

ಕ್ರಷ್

ಬಹುಪಾಲು ಮಂದಿ ಗಾರ್ಮೆಂಟ್ಸ್ ಮಹಿಳೆಯರು ಪರಊರುಗಳಿಂದ ಬಂದವರಾದ್ದರಿಂದ, ಅವರಿಗೆ ಅವರ ಮಕ್ಕಳನ್ನು ನೋಡಿಕೊಳ್ಳುವ ಕ್ರಶ್‌ನ ಅಗತ್ಯವಿದೆ. ಆದರೆ ಕಾರ್ಖಾನೆಗಳಲ್ಲಿ ಕ್ರಷ್ ಇರುವುದಿಲ್ಲ, ಕೆಲವೇ ಕಾರ್ಖಾನೆಗಳಲ್ಲಿ ಇದ್ದರೂ ಅಲ್ಲಿನ ವ್ಯವಸ್ಥೆ ಚೆನ್ನಾಗಿಲ್ಲ, ಕಾನೂನಿನ ಪ್ರಕಾರ ಯಾವುದೇ ಕಾರ್ಖಾನೆಯಲ್ಲಿ 30 ಮಂದಿಗಿಂತ ಹೆಚ್ಚು ಮಹಿಳೆಯರಿದ್ದರೆ ಅವರ ಮಕ್ಕಳನ್ನು ನೋಡಿಕೊಳ್ಳಲು ತರಬೇತಿ ಪಡೆದ ಆಯಾ ಇರುವ ಸುಸಜ್ಜಿತ ಕ್ರಷ್ ಇರಲೇಬೇಕು, ಇದನ್ನು ಮಾಲೀಕರು ಕಡ್ಡಾಯವಾಗಿ ಪಾಲಿಸಲೇ ಬೇಕು.

**ಬನ್ನಿ........ಗಾರ್ಮೆಂಟ್ಸ್ ಮಹಿಳೆಯರ ಮಾನವ ಹಕ್ಕುಗಳನ್ನು ಬೆಂಬಲಿಸೋಣ**

---


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ** — ನಂ.396, 1ನೇ ಮಹಡಿ, ಗಣೇಶ ದೇವಸ್ಥಾನದ ಹತ್ತಿರ ನಾಯಂಡಹಳ್ಳಿ ಸರ್ಕಲ್, ಮೈಸೂರು ರಸ್ತೆ, ಬೆಂ–39

**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್(GATWU)** -ನಂ 17/1, ಹೊಸಗುಡ್ಡದಹಳ್ಳಿ, ಬಸ್ ನಿಲ್ದಾಣದ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು – 560 026 ದೂ: 26745242


Scanned with OKEN Scanner